**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1902/2025**

| | | |
|---|---|---|
| ಸಾಕ್ಷಿದಾರರ ಹೆಸರು | : ವಿಷ್ಣು ಕುಮಾರ್ | ಪ್ರಾಸಾ-6 |
| ತಂದೆಯ ಹೆಸರು | : ರಾಮೇಗೌಡ | ಚಾಸಾ-9 |
| ವಯಸ್ಸು | : 47 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಮುಖ್ಯ ಪೇದೆ | ದಿನಾಂಕಃ 27.02.2026. |
| ವಾಸಸ್ಥಳ | : ಡಿ.ಎ.ಆರ್ ಚಿಕ್ಕಮಗಳೂರು | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2016 ರಿಂದ ಇಲ್ಲಿಯವರೆಗೂ ಡಿ.ಎ.ಆರ್ ಚಿಕ್ಕಮಗಳೂರಿನಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.03.02.2025 ರಂದು ಕಳಸ ಪೋಲಿಸ್ ಠಾಣೆಯಿಂದ ನಮ್ಮ ಠಾಣೆಗೆ ಒಂದು ಬಂದೂಕು ಸಿಕ್ಕಿರುವ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ ಮತ್ತು ಪರಿಶೀಲಿಸಿ ವರದಿಯನ್ನು ನೀಡುವಂತೆ ಕೋರಿಕೊಂಡಿರುತ್ತಾರೆ. ಅದೇ ದಿನ ನಾನು ಕಳಗೋಡು ಗ್ರಾಮಕ್ಕೆ ಬಂದು ಒಂದು SBML ಬಂದೂಕನ್ನು ಶೆಡ್ ನ ಬಳಿ ಇರುವುದನ್ನು ತೋರಿಸಿರುತ್ತಾರೆ ನಾನು ಅದರ ಮಹಜರ್ ಕ್ರಮವನ್ನು ಜರುಗಿಸುವ ಸಮಯದಲ್ಲಿ ನಾನು ಹಾಜರಿದ್ದು ಸದರಿ ಬಂದೂಕು 59 ಇಂಚು ಉದ್ದವಿರುತ್ತದೆ. ಅದರ ಒಳಗೆ ಯಾವುದೇ ಮದ್ದುಗುಂಡುಗಳು ಇರಲಿಲ್ಲ. ಸದರಿ ಬಂದೂಕು ಎರಡು ಭಾಗಗಳಾಗಿರುತ್ತದೆ. ಆರೋಪಿಯು ಸದರಿ ಸಮಯದಲ್ಲಿ ಎರಡು ಬಾಕ್ಸ್ ಗಳನ್ನು ನೀಡಿರುತ್ತಾರೆ ಸದರಿ ಬಾಕ್ಸ್ ನಲ್ಲಿ ಸೀಸದ ಗುಂಡುಗಳು, ಕೇಪ್ ಮತ್ತು ತೆಂಗಿನ ನಾರು ಇರುತ್ತವೆ. ನಂತರ ಅವುಗಳನ್ನು ಪರೀಕ್ಷಿಸಲಾಗಿ ಬಂದೂಕಿನ ಬ್ಯಾರಲ್ ಒಡೆದಿರುವುದು ಕಂಡುಬಂದಿರುತ್ತದೆ ಮತ್ತು ಸದರಿ ವಸ್ತುಗಳನ್ನು ಅಮಾನತುಪಡಿಸಿಕೊಳ್ಳಲಾಗಿರುತ್ತದೆ. ಸದರಿ ಅಮಾನತು ಮಹಜರ್ ನ್ನು 3.30 ರಿಂದ 4.30 ರವರೆಗೂ ಜರುಗಿಸಲಾಗಿರುತ್ತದೆ.

ಸಾಕ್ಷಿಯು ನಿಪಿ-4 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅದರಲ್ಲಿರುವ ಬಂದೂಕುಗಳನ್ನು ತಾವು ಅಮಾನತುಪಡಿಸಿಕೊಂಡ ಬಗ್ಗೆ ಗುರುತಿಸಿದ ಕಾರಣ, ಸದರಿ ಫೋಟೋಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ತೋರಿಸಲಾಗಿ ತಾವು ಸದರಿ ವಸ್ತುಗಳನ್ನು ಅಮಾನತ್ ಮಹಜರ್ ಸಮಯದಲ್ಲಿ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ಗುರುತಿಸಿದ ಮೇರೆಗೆ ಸದರಿ ವಸ್ತುಗಳಲ್ಲಿ ಕಪ್ಪು ಬಣ್ಣದ ಬ್ಯಾಗ್ ನ್ನು ಎಂ.ಒ.1, ಸೀಸದ ಗುಂಡುಗಳನ್ನು ಎಂ.ಒ.2, ಅಲ್ಯೂಮೀಯಂ ಬಾಕ್ಸ್ ನ್ನು ಎಂ.ಒ.3, ಬಂದೂಕಿನ ಕೇಪುಗಳಿರುವ ಪ್ಲಾಸ್ಟಿಕ್ ಬಾಕ್ಸ್ ನ್ನು ಎಂ.ಒ.4 ಮತ್ತು ತೆಂಗಿನ ನಾರನ್ನು ಎಂ.ಒ.5 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ನಾನು ಡಿ.ಎ.ಆರ್ ಚಿಕ್ಕಮಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನನಗೆ ದೂರವಾಣಿ ಮುಖಾಂತರ ಸ್ಥಳಕ್ಕೆ ಬರಲ ತಿಳಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾರ ಬಳಿಯೂ ಹೇಳಿಕೆಯನ್ನು ನೀಡಿರುವುದಿಲ್ಲ. ನನ್ನನ್ನು ಸಂಚಾರಿ ದೂರವಾಣಿ ಮುಖಾಂತರ ಸ್ಥಳಕ್ಕೆ ಬರಲು ತಿಳಿಸಿದ ಬಗ್ಗೆ ಮಹಜರ್ ನಲ್ಲಿ ಬರವಣಿಗೆ ಮಾಡಲಾಗಿರುವುದಿಲ್ಲ. ನಿಪಿ-10 ಮತ್ತು 11 ರಲ್ಲಿ ನಾನು ಕಾಣುತ್ತಿಲ್ಲ ಎಂದರೆ ಸರಿ. ಸದರಿ ನಿಶಾನೆಯಲ್ಲಿ ನನ್ನನ್ನು ಹೊರುತುಪಡಿಸಿ ನಿಪಿ-4 ಕ್ಕೆ ಸಹಿ ಮಾಡಿದ ಇತರ ವ್ಯಕ್ತಿಗಳು ಅದರಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ನಿಪಿ-10 ಮತ್ತು 11 ನ್ನು ಶೆಡ್ ನಲ್ಲಿ ತೆಗೆಯಲಾಗಿರುತ್ತದೆ, ಸದರಿ ಜಾಗದ ಸ.ನಂ. ಮತ್ತು ಮಾಲೀಕರ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಿಪಿ-10 ಮತ್ತು 11 ರಲ್ಲಿ ಕಾಣುವ ವಸ್ತುಗಳ ಮೇಲೆ ಸದರಿ ವಸ್ತುವು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದು ತೋರಿಸಲು ಯಾವುದೇ ವಿಶೇಷವಾದ ಗುರುತು ಇಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಫೋಟೋಗಳನ್ನು ಯಾರು ತೆಗೆದರು ಎಂದು ಹೇಳಲು ಸಾದ್ಯವಿಲ್ಲ. ಸದರಿ ವ್ಯಕ್ತಿ ನಾನು ಸಹಿ ಮಾಡಿರುವ ದಾಖಲಾತಿಗೆ ಸಹಿ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಎಂ.ಒ.2 ರಿಂದ 5 ಪರವಾನಿಗೆ ಹೊಂದಿದ ಮದ್ದುಗುಂಡುಗಳ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ನಿಪಿ-10 ಮತ್ತು 11 ರಲ್ಲಿ ಕಂಡುಬರುವ ಹಗ್ಗದ ಅಳತೆಯ ಬಗ್ಗೆ ತಿಳಿದಿರುವುದಿಲ್ಲ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ವಸ್ತುಗಳನ್ನು ಹಾಜರುಪಡಿಸಿದ್ದಲ್ಲಿ ಅವರ ಒಟ್ಟಿಗೆ ಗುರುತುವಿಕೆಗಾಗಿ ಫೋಟೋವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ. ನಿಪಿ-10 ಮತ್ತು 11 ರಲ್ಲಿ ವಸ್ತುಗಳನ್ನು ಹಾಜರುಪಡಿಸಿದ ವ್ಯಕ್ತಿಯ ಫೋಟೋ ಇರುವುದಿಲ್ಲ ಎಂದರೆ ಸರಿ. ಸದರಿ ವ್ಯಕ್ತಿಯ ಸಹಿಯು ನಿಪಿ-4 ರಲ್ಲಿ ಇಲ್ಲ ಎಂದರೆ ಸರಿ. ಎಂ.ಒ.1 ರಿಂದ 5 ರ ಮೇಲೆ ಪ್ರಕರಣ ಸಂಖ್ಯೆ ಇರುವುದಿಲ್ಲ ಎಂದರೆ ಸರಿ. ಆ ದಿನ ಸ್ಥಳಕ್ಕೆ ಇಲಾಖಾ ವಾಹನದಲ್ಲಿ 3 ಜನ ಹೋಗಿರುತ್ತೇವೆ. ಸದರಿ ಸಮಯದಲ್ಲಿ ನನ್ನೊಟ್ಟಿಗೆ ಬಂದ 3 ಜನ ಸಿಬ್ಬಂಧಿಗಳು ಮಹಜರ್ ಸಮಯದಲ್ಲಿ ಹಾಜರಿದ್ದರು. ಸದರಿ ಸಮಯದಲ್ಲಿ ಸದರಿ 3 ಸಿಬ್ಬಂಧಿಗಳು ನಿಪಿ-4 ನ್ನು ಬರವಣಿಗೆ ಮಾಡಲು ಸಹಾಯವಾಗುವಂತೆ ಪರಿಶೀಲನೆ ಮಾಡುತ್ತಿದ್ದರು. ಸಾಮಾನ್ಯವಾಗಿ ಒಂದು ಪ್ರಕರಣದ ಚಟುವಟಿಕೆಯಲಕ್ಲಿ ಭಾಗವಹಿಸಿದ ವ್ಯಕ್ತಿಗಳ ಸಹಿಯನ್ನು ಮಹಜರ್ ನಲ್ಲಿ ಪಡೆದುಕೊಳ್ಳಲಾಗುತ್ತದೆ ಎಂದರೆ ಸರಿ. ಆ ರೀತಿಯಾಗಿ ನನ್ನೊಟ್ಟಿಗೆ ಬಂದ ಇತರೆ ಮೂರು ಸಿಬ್ಬಂಧಿಗಳ ಸಹಿಯನ್ನು ನಿಪಿ-4 ರಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಿಪಿ-10 ಮತ್ತು 11 ರಲ್ಲಿ ಕಾಣುತ್ತಿರುವ ವಸ್ತು SBML ಗನ್ನು ಅಲ್ಲ ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ರಲ್ಲಿ ಕಾಣುವ ವಸ್ತು ಉಪಯೋಗಕ್ಕೆ ಬಾರದೇ ಇರುವ ವಸ್ತು ಎಂದರೆ ಸರಿ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಇಲಾಖೆಯವರ ಸಹಾಯಕ್ಕಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1902/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಅಲಿಗೇಶನ್ | ಪ್ರಾಸಾ-7 |
| ತಂದೆಯ ಹೆಸರು | : ಸುಬ್ರಹ್ಮಣ್ಯ | ಚಾಸಾ-10 |
| ವಯಸ್ಸು | : 28 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 27.02.2026. |
| ವಾಸಸ್ಥಳ | : ಕಳಗೋಡು | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ರವರ ಪರಿಚಯ ನನಗಿಲ್ಲ.

ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ-10 ಮತ್ತು 11 ರಲ್ಲಿ ಕಾಣುವ ವಸ್ತುಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಪ್ರಕರಣದ ಪ್ರತ್ಯಕ್ಷ ದರ್ಶಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಸಾಕ್ಷಿಗೆ ದಿ.01.03.2025 ರ ತನ್ನ ಹೇಳಿಕೆಯ ಸಂಪೂರ್ಣ ಭಾಗವನ್ನು ಓದಿ ಹೇಳಿದ್ದು ಸಾಕ್ಷಿಯು ಅದನ್ನು ಅಲ್ಲಗಳೆದ ಕಾರಣ, ಸದರಿ ಹೇಳಿಕೆಯ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1902/2025</u>**

| | | |
|---|---|---|
| ಸಾಕ್ಷಿದಾರರ ಹೆಸರು | : ನವೀನ್ | ಪ್ರಾಸಾ-8 |
| ತಂದೆಯ ಹೆಸರು | : ಪುಟ್ಟಸ್ವಾಮಿಗೌಡ | ಚಾಸಾ-11 |
| ವಯಸ್ಸು | : 38 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ 27.02.2026. |
| ವಾಸಸ್ಥಳ | : ಕಳಗೋಡು | |

**<u>:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-1 ರವರ ಪರಿಚಯ ನನಗಿಲ್ಲ.

ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಿಪಿ-10 ಮತ್ತು 11 ರಲ್ಲಿ ಕಾಣುವ ವಸ್ತುಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಪ್ರಕರಣದ ಪ್ರತ್ಯಕ್ಷ ದರ್ಶಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ಸಾಕ್ಷಿಗೆ ದಿ.01.03.2025 ರ ತನ್ನ ಹೇಳಿಕೆಯ ಸಂಪೂರ್ಣ ಭಾಗವನ್ನು ಓದಿ ಹೇಳಿದ್ದು ಸಾಕ್ಷಿಯು ಅದನ್ನು ಅಲ್ಲಗಳೆದ ಕಾರಣ, ಸದರಿ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.